



# ವಿಶ್ವ ದಾಖಲೆಗಳ ವೀರ

ಕೇವಲ ಒಂದು ಗಿನ್ನಿಸ್ ವಿಶ್ವ ದಾಖಲೆಯನ್ನು ಮಾಡಿದರೆ ಸಾಕು, ಅದೊಂದು ಬಲು ಹೆಮ್ಮೆಯ ಸಂಗತಿ. ಆದರೆ ನ್ಯೂಯಾರ್ಕ್ ನ ಬ್ರೂಕ್ ಲಿನ್‌ನಲ್ಲಿ ಜನಿಸಿದ ಅಶ್ರೀತಾ ಫರ್‌ಮ್ಯಾನ್ ಮಾಡಿರುವ ದಾಖಲೆಗಳ ಪಟ್ಟಿಯನ್ನು ನೋಡಿದರೆ ಸಾಕು, ಎಂಥವರೂ ಬೆರಗಾಗುವುದು ಖಂಡಿತ.

ಕ್ವೀನ್ಸ್ ನಗರದಲ್ಲಿ ವಾಸವಾಗಿರುವ 57 ವರ್ಷದ ಈ ಬ್ರಹ್ಮಚಾರಿ, ಬರೋಬ್ಬರಿ 409 ಗಿನ್ನಿಸ್ ವಿಶ್ವದಾಖಲೆಗಳನ್ನು ಮಾಡಿದ್ದಾನೆ! ಈತ ಚಿಕ್ಕವನಿದ್ದಾಗಲೇ ಗಿನ್ನಿಸ್ ವಿಶ್ವದಾಖಲೆಯನ್ನು ಮಾಡುವ ಕನಸನ್ನು ಕಾಣುತ್ತಿದ್ದನಂತೆ. ಮೊಟ್ಟಮೊದಲ ಬಾರಿ 1979ರಲ್ಲಿ 27,000 ಜಿಗಿತ (6 ಗಂಟೆ 45 ನಿಮಿಷಗಳಲ್ಲಿ) ಗಳಿಂದ ಈತ ಮಾಡಿರುವ ವಿಶ್ವ ದಾಖಲೆ ಮೊದಲನೆಯದ್ದು. ಈತನ ಸಹೋದ್ಯೋಗಿ ಬಿಪಿನ್ ಲಾರ್ಕಿನ್ ಪ್ರಕಾರ ಅಶ್ರೀತಾ ಫರ್‌ಮ್ಯಾನ್‌ಗೆ , ವಿಶ್ವ ದಾಖಲೆಗಳನ್ನು ಮುರಿಯುವ ಉತ್ಸಾಹ ಬಂದದ್ದು 1964ರಲ್ಲಿ ಬಂಗಾಳದ ಚಿನ್ಮಯ ಗುರುಗಳನ್ನು ಭೇಟಿ ಮಾಡಿದಾಗ.

ಕೇತ್ ಎನ್ನುವ ಮೂಲ ಹೆಸರನ್ನು ಬದಲಿಸಿದ ಚಿನ್ಮಯ ಗುರುಗಳು, ಅಶ್ರೀತಾಗೆ ವಿಶ್ವದಾಖಲೆಗಳನ್ನು ಮುರಿ ಎಂದು ಚಾಲೆಂಜ್ ನೀಡಿದರಂತೆ. ಕ್ವೀನ್ಸ್ ನಗರದಲ್ಲಿರುವ ಸಿದ್ಧ ಆಹಾರದ ಅಂಗಡಿಯೊಂದರ ಪಾರ್ಟನರ್ ಹಾಗೂ ಮೆಡಿಟೇಶನ್ ಗ್ರೂಪ್‌ನ ಪ್ರವಾಸ ನಿಯೋಜಕನಾಗಿರುವ ಅಶ್ರೀತಾ ಫರ್ ಮ್ಯಾನ್, ಜಗತ್ತಿನ ಎಲ್ಲಾ ಏಳು ಖಂಡಗಳಲ್ಲಿ ಹಾಗೂ 30 ರಾಷ್ಟ್ರಗಳಲ್ಲಿ ವಿಶ್ವ ದಾಖಲೆಗಳನ್ನು ಮಾಡಿ ತೋರಿಸಿದ್ದಾನೆ. 24 ತಾಸುಗಳಲ್ಲಿ 12 ಮೈಲುಗಳಷ್ಟು ದೂರ ಕಾರನ್ನು ತಳ್ಳಿದ್ದು, ಹಾಲಿನ ಬಾಟಲ್ ಅನ್ನು ತಲೆ ಮೇಲಿರಿಸಿಕೊಂಡು 95 ಮೈಲು ನಡೆದಿದ್ದು, 60 ಸೆಕೆಂಡ್‌ಗಳಲ್ಲೇ ಸಮುರಾಯ್ ಕತ್ತಿಯಿಂದ 27 ಸೇಬುಗಳನ್ನು ಕತ್ತರಿಸಿದ್ದು, ಮಂಗೋಲಿಯಾದಲ್ಲಿ ಯಾಕ್ ಪ್ರಾಣಿಯೊಂದಿಗೆ ಸ್ಯಾಕ್ ರೇಸ್ (ಗೋಣಿ ಚೀಲ ಕಟ್ಟಿಕೊಂಡು ಓಡುವ ಸ್ಪರ್ಧೆ) ಮಾಡಿದ್ದು, ಸ್ಟೋನ್ ಹೆಂಜ್‌ನಲ್ಲಿ ಸ್ವಿಸ್ ಬಾಲ್ ಮೇಲೆ ಬಹಳ ಹೊತ್ತು ನಿಂತು ಬ್ಯಾಲೆನ್ಸ್ ಮಾಡಿದ್ದು, ಕೌಲಾಲಂಪೂರದಲ್ಲಿ ಒಂದು ನಿಮಿಷದಲ್ಲಿ ಬಹಳಷ್ಟು ದ್ರಾಕ್ಷಿಗಳನ್ನು ಬಾಯಿಯಿಂದ ಕ್ಯಾಚ್ ಮಾಡಿದ್ದು, ಟರ್ಕಿ ದೇಶದಲ್ಲಿ ಬಹಳಷ್ಟು ಉದ್ದನೆಯ ಕೋಲನ್ನು ಬ್ಯಾಲೆನ್ಸ್ ಮಾಡಿದ್ದು– ಇವೆಲ್ಲವೂ ಈತನ ಕೆಲವು ಸಾಹಸಗಳು.

■ ವಿದ್ಯಾ ವಿ ಹಾಲಭಾವಿ